ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

ಇಲಾಖೆ / ವಿಷಯ: DEPARTMENT / SUBJECT: [illegible]

ಪತ್ರಿಕೆಯ ಹೆಸರು : NAME OF THE NEWS PAPER : ವಿಜಯ ಕರ್ನಾಟಕ    ದಿನಾಂಕ : DATE : 5/7/19

# ಗೌರವಸ್ಥರು ರಾಜೀನಾಮೆ ಕೊಡುವುದಿಲ್ಲ

## ಮತ್ತೆ ಗರಂ ಆದ ಸ್ಪೀಕರ್ ರಮೇಶ್‌ಕುಮಾರ್

5/7/19

**ವಿಕ ಸುದ್ದಿಲೋಕ** ಬೆಂಗಳೂರು



ಶಾಸಕರ ರಾಜೀನಾಮೆ ವಿಚಾರದಲ್ಲಿ ಮತ್ತೊಮ್ಮೆ ಗರಂ ಆಗಿರುವ ಸ್ಪೀಕರ್ ಕೆ.ಆರ್.ರಮೇಶ್ ಕುಮಾರ್, ಗೌರವಸ್ಥರು ಹೀಗೆ ಮಾಡುವುದಿಲ್ಲ, ವ್ಯಾಪಾರಸ್ಥರು ಮಾತ್ರ ಹೀಗಾಡುತ್ತಾರೆಂದು ಗುಡುಗಿದ್ದಾರೆ.

ಡಿಸಿಎಂ ಜಿ.ಪರಮೇಶ್ವರ, ಕೆಪಿಸಿಸಿ ಕಾರ್ಯಾಧ್ಯಕ್ಷ ಈಶ್ವರ ಖಂಡ್ರೆ ಮತ್ತು ಸಚಿವ ಶಿವಾನಂದ ಪಾಟೀಲ್ ಸ್ಪೀಕರ್ ಅವರನ್ನು ಗುರುವಾರ ಭೇಟಿಯಾಗಿ ಚರ್ಚಿಸಿದರು. ಅದಾದ ಬಳಿಕ ಸುದ್ದಿಗಾರರಿಗೆ ಪ್ರತಿಕ್ರಿಯಿಸಿದ ಸ್ಪೀಕರ್, ''ಮಾಡುವುದಕ್ಕೆ ಕೆಲಸವಿಲ್ಲದವರು ರಾಜೀನಾಮೆ ಕೊಡುತ್ತೇನೆ ಎನ್ನುತ್ತಾರೆ. ಇದು ಗೌರವಸ್ಥರು ಮಾಡುವ ಕೆಲಸವೇ ಅಲ್ಲ, ರಾಜಕಾರಣದಲ್ಲಿ ಗುಮಾನಿ, ಗುಟ್ಟು ಇರಬಾರದು. ಗುಟ್ಟಾಗಿ ಏನೇ ಮಾಡಿದರೂ ಅದು ವ್ಯಾಪಾರವಾಗುತ್ತದೆ,'' ಎಂದು ಶಾಸಕ ಸ್ಥಾನ ತ್ಯಜಿಸುವುದಾಗಿ ಕಣ್ಣಾಮುಚ್ಚಾಲೆ ಆಡುತ್ತಿರುವವರ ವಿರುದ್ಧ ಪರೋಕ್ಷವಾಗ್ದಾಳಿ ನಡೆಸಿದರು.

### ದೂರು ಕೊಡದೆ ವಾಪಸ್ ಬಂದರು

ಈ ಮಧ್ಯೆ ರಮೇಶ್ ಜಾರಕಿಹೊಳಿ ವಿರುದ್ಧ ದೂರು ಸಲ್ಲಿಸಲು ಸ್ಪೀಕರ್ ಬಳಿ ತೆರಳಿದ್ದ ಕೆಪಿಸಿಸಿ ಕಾರ್ಯಾಧ್ಯಕ್ಷ ಈಶ್ವರ ಖಂಡ್ರೆ ನೇತೃತ್ವದ ನಿಯೋಗದ ದೂರು ಸಲ್ಲಿಸದೆ ವಾಪಸಾದರು. ಜಾರಕಿಹೊಳಿ ಇನ್ನೂ ರಾಜೀನಾಮೆ ನೀಡಿಲ್ಲವೆಂದು ಸ್ಪೀಕರ್ ತಿಳಿಸಿದ್ದರಿಂದ ಕೈನಾಯಕರು ದೂರು ನೀಡದೆ ಹೊರಟರು ಎನ್ನಲಾಗಿದೆ. ಕಾಂಗ್ರೆಸ್ ನಾಯಕರು ದೂರು ನೀಡಿಲ್ಲವೆಂದು ಸ್ಪೀಕರ್ ಅವರೂ ಸ್ಪಷ್ಟಪಡಿಸಿದ್ದಾರೆ. ಆನಂದ್ ಸಿಂಗ್ ರಾಜೀನಾಮೆ ಕೊಟ್ಟಿದ್ದಾರಾ ಎಂದು ಅವರು ಕೇಳಿದರು. ಅದಕ್ಕೆ ಹೌದು ಎಂಬ ಉತ್ತರ ಕೊಡಲಾಗಿದೆಯೆಂದು ಸ್ಪೀಕರ್ ತಿಳಿಸಿದ್ದಾರೆ. ಸ್ಪೀಕರ್ ಭೇಟಿ ಬಳಿಕ ಪ್ರತಿಕ್ರಿಯಿಸಿರುವ ಈಶ್ವರ ಖಂಡ್ರೆ, ''ನಾವು ಯಾವುದೇ ದೂರು ನೀಡಿಲ್ಲ. ಆನಂದ್ ಸಿಂಗ್ ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರೂ ನಮ್ಮ ಪಕ್ಷದ ಸದಸ್ಯತ್ವ ತೊರೆದಿಲ್ಲ, ಮುಂದೇನು ಮಾಡಬೇಕೆಂದು ಪಕ್ಷದ ಹಿರಿಯರೊಂದಿಗೆ ಚರ್ಚಿಸಲಾಗುವುದು,'' ಎಂದರು. ಇದೇ ವೇಳೆ ಮಾತನಾಡಿದ ಡಿಸಿಎಂ, ''ನಾನು ಸಂಸದೀಯ ಖಾತೆ ಹೊಂದಿರುವುದರಿಂದ ವಿಧಾನಮಂಡಲ ಅಧಿವೇಶನ ತಯಾರಿ ಬಗ್ಗೆ ಸಮಾಲೋಚಿಸಿದೆ,'' ಎಂದರು.

''ನಾನು ಪ್ರಜಾತಾಂತ್ರಿಕ ವ್ಯವಸ್ಥೆಯಡಿ ಕೆಲಸ ಮಾಡುತ್ತೇನೆ. ಯಾರಾದರೂ ರಾಜೀನಾಮೆ ಕೊಡುವುದಾಗಿ ಹೇಳಿದರೆ ನನ್ನ ಬಳಿ ಕರೆತನ್ನಿ. ರಮೇಶ್ ಜಾರಕಿಹೊಳಿ ನನ್ನನ್ನು ಸಂಪರ್ಕಿಸಿಲ್ಲ, ಅವರು ರಾಜೀನಾಮೆಯನ್ನೂ ನೀಡಿಲ್ಲ, ಅಷ್ಟಕ್ಕೂ ಯಾರೂ ನನ್ನ ಅಪಾಯಿಂಟ್‌ಮೆಂಟ್ ಕೇಳಿಲ್ಲ. ನೀವಷ್ಟೇ (ಮಾಧ್ಯಮದವರು) ಕೇಳುತ್ತಿದ್ದೀರಿ. ಅದಕ್ಕಾಗಿ ನೂರಾರು ಕಿ.ಮೀ. ದೂರದಿಂದ ದಿನವೂ ಬರುತ್ತಿದ್ದೇನೆ. ಹಾಗಾಗಿ ಹುಷಾರಿಲ್ಲದಂತಾಗಿದೆ'' ಎಂದರು.

**ನಿರ್ಬಂಧವಿದೆ:** ಆಪರೇಷನ್ ಕಮಲ ಕುರಿತ ಆಡಿಯೊ ಪ್ರಕರಣದ ತನಿಖೆ ಬಗ್ಗೆ ಕೇಳಿದಾಗ, ''ಈ ಬಗ್ಗೆ ಸೂಕ್ತ ಸಂದರ್ಭದಲ್ಲಿ ಸೂಕ್ತ ವೇದಿಕೆಯಲ್ಲಿ ಮಾತನಾಡುವೆ. ನಾನು ಸ್ಪೀಕರ್ ಆಗಿರುವುದರಿಂದ ಕೆಲ ನಿರ್ಬಂಧವಿದೆ. ನನಗೆ ಮಾತನಾಡುವ ಸ್ವಾತಂತ್ರ್ಯವಿಲ್ಲ, ಕೆಲವು ಪ್ರಶ್ನೆಗಳಿಗೆ ಉತ್ತರಿಸಲು ಸಾಧ್ಯವಿಲ್ಲ'' ಎಂದು ಹೇಳಿದರು.